ಓ.ಎಸ್ ನಂ. 106/2015

ಪಿ. ಡಬ್ಲ್ಯೂ: 1

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 19-11-2025 ರಂದು ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಶ್ರೀ ಕೆ ಆರ್ ಡಿ ನ್ಯಾಯವಾದಿರವರಿಂದಃ

ದಾವಾ ಜಮೀನು ಒಟ್ಟು ಕ್ಷೇತ್ರದ ಪೈಕಿ ಪಾರ್ವತಿ ಗೋವಿಂದ ನಾಯ್ಕ ಇವರ ಹೆಸರಿಗೆ ಒಂದು ಗುಂಟೆ 8 ಆಣೆ ಜಮೀನು ಹೋಗಿರುತ್ತದೆ ಎಂದರೆ ಸರಿ. ಸಾಕ್ಷಿ ಅದನ್ನು ಸರಕಾರದಿಂದ ಬಂದಿರುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಶ್ರೀಮತಿ ರೇಖಾ ಕೋಂ ರಮಾಕಾಂತ ವಾಗಳೆ , ಜೋತ್ಸ್ನಾ ದುರ್ಗಾದಾಸ ವಾಗಳೆ ಹಾಗೂ ಗಣಪತಿ ಕೃಷ್ಣರಾವ ವಾಗಳೆ ಇವರಿಗೆ 18 ಗುಂಟೆ 6.5 ಆಣೆ ವಿಸ್ತೀರ್ಣದ ಜಮೀನು ಹೋಗಿರುತ್ತದೆ ಎಂದರೆ ಸರಿ. ನಮ್ಮ ಕುಟುಂಬಕ್ಕೆ 15 ಗುಂಟೆ 7 ಆಣೆ ವಿಸ್ತೀರ್ಣದ ಕ್ಷೇತ್ರ ನಾವು ಆಧರಿಸುವಂತೆ ಬಂದಿರುತ್ತದೆ. ಭಾಗೀರಥಿ ರಮಾಜಿ ಗುರವ ಇವರಿಗೆ 17 ಗುಂಟೆ , ದತ್ತಾತ್ರಯ ವಾಸುದೇವ ಶೇಟ ರವರಿಗೆ 6 ಗುಂಟೆ , ರಾಧಾಬಾಯಿ ಪುಟ್ಟು ನಾಯ್ಕ ಇವರಿಗೆ 2 ಗುಂಟೆ 4 ಆಣೆ ಹಾಗೂ ದಿನೇಶ ಶ್ರೀಕಾಂತ ನಾಯ್ಕ , ಆರತಿ ಅರುಣ ಪವಾರ ಮತ್ತು ಶ್ರೀಮತಿ ಸಂಧ್ಯಾ ಶಿವಾನಂದ ರಾಣೆ ಮೂರು ಜನರಿಗೂ ಒಟ್ಟು 5 ಗುಂಟೆ ಹಾಗೂ ಕರ್ನಾಟಕ ಸರಕಾರ , ಲೋಕೋಪಯೋಗಿ ಇಲಾಖೆ ಇವರ ಹೆಸರಿಗೆ 4 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ದಾವಾ ಸರ್ವೇ ನಂಬರ ದುರಸ್ತಿ ಆಗುವ ಪೂರ್ವದಲ್ಲಿ ಇದ್ದ ಕ್ಷೇತ್ರ 1 ಎಕರೆ 25 ಗುಂಟೆ 5 ಆಣೆ ನೇದರಲ್ಲಿ ಈ ಮೇಲಿನ ವ್ಯಕ್ತಿಗಳಳಿಗೆ ತೋರಿಸಿದ ಆಸ್ತಿಗಳನ್ನು ಸಾಮೂಹಿಕವಾಗಿ ತೋರಿಸಲಾಗಿರುತ್ತದೆ ಎಂದರೆ ಸರಿ. ಹೊಸ ಸರ್ವೇ ನಂಬರ ಪ್ರಕಾರ ದಾವಾ ಜಮೀನು ಒಟ್ಟು ಕ್ಷೇತ್ರ 1 ಎಕರೆ 33 ಗುಂಟೆ 15.6 ಆಣೆ ಕಾಣಿಸಲಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಸ್ವತಃ ಪಹಣಿ ಪತ್ರದಲ್ಲಿ ಪ್ರಸ್ತುತ ಒಂದು ಎಕರೆ 25 ಗುಂಟೆ ವಿಸ್ತೀರ್ಣದ ಜಮೀನನ್ನು ಕಾಣಿಸಲಾಗಿದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಿಡಿ.1 ರಲ್ಲಿ ದುರಸ್ತಿ ಆದ ನಂತರ ಒಟ್ಟು ಕ್ಷೇತ್ರವನ್ನು ಒಂದು ಎಕರೆ 33 ಗುಂಟೆ 5.7 ಆಣೆ ವಿಸ್ತೀರ್ಣ ಎಂದು ಕಾಣಿಸಿರುತ್ತಾರೆ ಎಂದರೆ ಸರಿ. ಕ್ಷೇತ್ರ ದುರಸ್ತಿ ಮಾಡಿದ್ದರಿಂದ ಪ್ರಸ್ತುತ ಪಹಣಿ ಪತ್ರದಲ್ಲಿ 6 ಗುಂಟೆ ಜಮೀನು ವ್ಯತ್ಯಾಸ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲಾ. ಈ ಮೇಲೆ ತಿಳಿಸಿದಂತೆ ಎಲ್ಲಾ ಕಬ್ಜಾದಾರರ ವಿಸ್ತೀರ್ಣವು ಸರ್ವೇ ದಾಖಲೆಗಳಲ್ಲಿ ಪೋಡಿ ಆಗಿರುವುದಿಲ್ಲಾ ಹಾಗೂ ಪ್ರತ್ಯೇಕ ಪ್ರತ್ಯೇಕ ನಕ್ಷೆ ಆಗಿರುವುದಿಲ್ಲಾ ಎಂದರೆ ಸರಿ. ಜಂಟಿ ನಕಾಶೆಯಲ್ಲಿ

ಯಾರ ಯಾರ ಆಸ್ತಿ ಎಲ್ಲೆಲ್ಲಿ ಇದೆ ಎಂಬುದನ್ನು ಕಾಣಿಸಿರುವುದಿಲ್ಲಾ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಈ ಬಗ್ಗೆ ಈಗ ನನಗೆ ಗೊತ್ತಿಲ್ಲಾ ಎಂದು ಸಾಕ್ಷ್ಯ ನುಡಿಯುತ್ತಾರೆ. ನಮ್ಮ ಕುಟುಂಬಕ್ಕೆ ಸೇರಿದ 15 ಗುಂಟೆ 7 ಆಣೆ ಕ್ಷೇತ್ರ ನಿರ್ಧಿಷ್ಟವಾಗಿ 1 ಎಕರೆ 33 ಗುಂಟೆಯಲ್ಲಿ ಎಲ್ಲಿ ಬರುತ್ತದೆ ಎಂದು ಕಾಣಿಸಲು ನಮ್ಮ ಬಳಿ ದಾಖಲೆಗಳು ಇರುತ್ತದೆ , ಆದರೆ ನಕಾಶೆಗಳು ಇರುವುದಿಲ್ಲಾ. ಸದರಿ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಬಲ್ಲೆನು. ಆ ರೀತಿ ಯಾವುದೇ ದಾಖಲೆ ನಮ್ಮ ಬಳಿ ಇರದೇ ಇದ್ದರೂ ಸಹಿತ ಇದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನಕಾಶೆ ಇದೆ, ಅದನ್ನು ಹಾಜರು ಪಡಿಸಬಹುದು ಎಂದು ಸಾಕ್ಷ್ಯ ನುಡಿಯುತ್ತಾರೆ. ನನ್ನ ಬಳಿ ಯಾವುದೇ ದಾಖಲೆ ಮತ್ತು ನಕಾಶೆ ಇಲ್ಲದಿದ್ದರೂ ಸಹಿತ ನಾನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಮ್ಮ ಬಳಿ ದಾಖಲೆ ಇದ್ದರೆ ಈ ವರೆಗೆ ನೀವು ನ್ಯಾಯಾಲಯಕ್ಕೆ ಯಾಕೆ ಹಾಜರು ಪಡಿಸಿರುವುದಿಲ್ಲಾ ಎಂದರೆ ಸಾಕ್ಷಿಯು ನಾನು ನನ್ನ ವಕೀಲರಿಗೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಪಹಣಿ ಪತ್ರದಲ್ಲಿ ನಮ್ಮ ಹಾಗೂ ಎಲ್ಲಾ ಹಿಸ್ಸೆದಾರರ ಹೆಸರನ್ನು ಸಾಮೂಹಿಕವಾಗಿ ಜಂಟಿ ಎಂದು ಕಾಣಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಸ್ವತಃ ಮಾದಪ್ಪ ವಿಶ್ರಾಮ ನಾಯ್ಕ ಇವರ ಹೆಸರು ಪಹಣಿ ಪತ್ರದಲ್ಲಿ ಇರುವುದಿಲ್ಲಾ ಎಂದು ಸಾಕ್ಷ್ಯ ನುಡಿಯುತ್ತಾರೆ.

ಪಾರ್ವತಿ ಗೋವಿಂದ ನಾಯ್ಕ ಇವರು ಕೋಮಾರಪಂತ ಜಾತಿಗೆ ಸೇರಿದವರು ಎಂದರೆ ಸರಿ. ಸಾಕ್ಷಿ ಸ್ವತಃ ಅವರಿಗೆ ಜಮೀನು ಸರಕಾರದಿಂದ ಮಂಜೂರಾಗಿರುತ್ತದೆಂದು ಸಾಕ್ಷ್ಯ ನುಡಿಯುತ್ತಾರೆ. ದತ್ತಾತ್ರೇಯ ವಾಸುದೇವ ಶೇಟ ಇವರು ವಾಣಿ ಜಾತಿಗೆ ಸೇರಿದವರು ಎಂದರೆ ಸರಿ. ರಾಧಾಬಾಯಿ ಪುತ್ತು ನಾಯ್ಕ ಇವರು ಕೋಮಾರಪಂತ ಜಾತಿಗೆ ಸೇರಿದವರು ಎಂದರೆ ಸರಿ. ದಿನೇಶ ಶ್ರೀಕಾಂತ ನಾಯ್ಕ , ಆರತಿ ಅರುಣ ಪವಾರ ಹಾಗೂ ಶ್ರೀಮತಿ ಸಂಧ್ಯಾ ಶಿವಾಜಿ ರಾಣೆ ಇವರು ಕೊಂಕಣ ಮರಾಠ ಜಾತಿಗೆ ಸೇರಿದವರು ಎಂದರೆ ಸರಿ. ಗಣಪತಿ ಕೃಷ್ಣರಾವ ವಾಗಳೆ ಮತ್ತು ಜೋತ್ಸ್ನಾ ದುರ್ಗಾದಾಸ ವಾಗಲೆ ಹಾಗೂ ಶ್ರೀಮತಿ ರೇಖಾ ರಮಾಕಾಂತ ವಾಗಳೆ ಇವರು ನಮ್ಮ ಜಾತಿಗೆ ಸೇರಿದವರು ಇರುತ್ತಾರೆ. ನಾವು ಗೌಡ ಸಾರಸ್ವತ ಬ್ರಾಹ್ಮಣ ಜಾತಿಗೆ ಸೇರಿದವರು ಇರುತ್ತೇವೆ. ಮುಕುಂದ ರಾಮಜಿ ಗುರವ ಇವರು ದೇವಳಿ ಸಮಾಜಕ್ಕೆ ಸೇರಿದವರು ಎಂದರೆ ಸರಿ. ಬಾಕಿ ಕ್ಷೇತ್ರದ ಮಾಲೀಕರು ನಮ್ಮ ಕುಟುಂಬಕ್ಕೆ ಸಂಬಂಧಪಟ್ಟವರು ಇರುವುದಿಲ್ಲಾ ಎಂದರೆ ಸರಿ. ರಮಾಕಾಂತ ವಾಗಳೆ ವಗೈರೆ ಇವರಿಗೆ ಸೇರಿದ 18

ಗುಂಟೆ 6.5 ನೇ ಕ್ಷೇತ್ರದ ಜಮೀನಿನಲ್ಲಿ ನಮಗೆ ಹಕ್ಕಿರುವುದಿಲ್ಲಾ ಎಂದರೆ ಸರಿ. ಸಾಕ್ಷಿಯು ಸ್ವತಃ ಸುಮಾರು 60-70 ವಾಗಳೆ ಕುಟುಂಬದ ಅಂದರೆ ರಮಾಕಾಂತ ವಾಗಳೆ ಮತ್ತು ನಮ್ಮ ಕುಟುಂದ ಜಮೀನನ್ನು ನಮ್ಮ ತಂದೆಯವರೇ ನೋಡುತ್ತಿದ್ದರು ಎಂದು ಸಾಕ್ಷ್ಯ ನುಡಿಯುತ್ತಾರೆ. ಈ ಬಗ್ಗೆ ದಾಖಲೆಗಳು ನನ್ನ ಬಳಿ ಇರುವುದಿಲ್ಲಾ , ಆದರೆ ಮೊದಲು ನಾವೆಲ್ಲರೂ ಒಟ್ಟು ಕುಟುಂಬದ ಸದಸ್ಯರಿದ್ದೇವೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಾವು ಮತ್ತು ರಮಾಕಾಂತ ವಾಗಳೆ ಕುಟುಂಬದವರು ಎಲ್ಲರೂ ಒಟ್ಟು ಕುಟುಂಬದ ಸದಸ್ಯರೆಂದು ಕಾಣಿಸಲು ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲಾ ಎಂದರೆ ಸರಿ. ನಾನು ಕುಟುಂಬದ ಮ್ಯಾನೇಜರ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಪಡಿಸಿರುವುದಿಲ್ಲಾ ಎಂದರೆ ಸರಿ. ನಾನು ಕುಟುಂಬದ ಮ್ಯಾನೇಜರ ಎಂದು ಈ ದಾವೆಯಲ್ಲಿ ಬರೆದಿರುತ್ತೇನೋ ಎಂದು ಈಗ ನೆನಪಿಲ್ಲಾ. ನನ್ನ ಸಹೋದರರು ಮತ್ತು ತಾಯಿಯ ಹೆಸರನ್ನು ಪಹಣಿ ಪತ್ರದಲ್ಲಿ ವೈಯಕ್ತಿಕವಾಗಿ ತೋರಿಸಿದ್ದು , ಈ ಬಗ್ಗೆ ನನ್ನನ್ನು ಕುಟುಂಬದ ಮ್ಯಾನೇಜರ ಎಂದು ಕಾಣಿಸಿರುವುದಿಲ್ಲಾ ಎಂದರೆ ಸರಿ. ನಾನು ಈ ದಾವೆಯಲ್ಲಿ ಅವಿಭಕ್ತ ಕುಟುಂಬದ ಸದಸ್ಯನಿರುತ್ತೇನೆ ಎಂದು ಸುಳ್ಳು ಹೇಳಿಸಿ ಬರೆಸಿರುತ್ತೇನೆಂದರೆ ಸರಿಯಲ್ಲ. ನಾನು ನಮ್ಮ ಕುಟುಂಬದ ಪರವಾಗಿ ದಾವಾ ನಡೆಸಲು ಉಳಿದ ಸದಸ್ಯರಿಂದ ಯಾವುದೇ ಮೊಕ್ತಾರುನಾಮೆಯನ್ನು ಪಡೆದಿರುವುದಿಲ್ಲಾ ಎಂದರೆ ಸರಿ. ನಾನು ದಾವಾ ಆಸ್ತಿಯನ್ನು ನಮ್ಮ ಒಟ್ಟು ಕುಟುಂಬದ ಆಸ್ತಿ ಇರುತ್ತದೆ ಎಂದು ಸುಳ್ಳು ಹೇಳಿಸಿ ಬರೆಸಿರುತ್ತೇನೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮ್ಮ ಹಿರಿಯರಿಂದ ಹಿಡಿದು ನನ್ನ ತನಕ ವಾಸ ಮಾಡಿರುತ್ತೇವೆ ಎಂದು ಕಾಣಿಸಲು ಕುಟುಂಬದ ಪಡಿತರ ಚೀಟಿ , ಆಧಾರ ಕಾರ್ಡ , ಮತದಾರರ ಪಟ್ಟಿ , ವಿದ್ಯುಚ್ಛಕ್ತಿ ಬಿಲ್ ಅಥವಾ ಇನ್ನಿತರ ಬಿಲ್ ಯಾವುದನ್ನೂ ಹಾಜರು ಪಡಿಸಿರುವುದಿಲ್ಲಾ ಎಂದರೆ ಸರಿ. ಸಾಕ್ಷಿ ಸ್ವತಃ ದಾವಾ ಆಸ್ತಿಯಲ್ಲಿ ಮಾವಿನ ಸಸಿ , ತೆಂಗಿನ ಸಸಿ ಇನ್ನಿತರ ಗಿಡಗಳನ್ನು ಬೆಳೆಸಿದ್ದು , ಒಂದು ಶೆಡ್ ಮಾತ್ರ ಕಟ್ಟಿರುತ್ತೇವೆಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ ಶೆಡ್ ನ್ನು ವಾಸ್ತವ್ಯಕ್ಕೆ ಉಪಯೋಗಿಸುವುದಿಲ್ಲಾ ಎಂದರೆ ಸರಿ. ನಮ್ಮ ಕುಟುಂಬದ ಸದಸ್ಯರ ಮತದಾರರ ಗುರುತಿನ ಚೀಟಿ ಹಾಗೂ ಇನ್ನಿತರ ಗುರುತಿನ ಚೀಟಿಗಳು ಮುಂಬೈನ ವಿಳಾಸದಲ್ಲಿ ಇರುತ್ತದೆ ಎಂದರೆ ಸರಿ. ಸಾಕ್ಷಿ ಸ್ವತಃ ನಾನು ಪ್ರಾಥಮಿಕ ವಿದ್ಯಾಭ್ಯಾಸವನ್ನು ಮಾಜಾಳಿಯಲ್ಲಿ ಮಾಡಿರುತ್ತೇನೆ. ಆಧಾರಕಾರ್ಡ ಇತ್ತೀಚೆಗೆ ಬಂದ ದಾಖಲೆ ಇರುತ್ತದೆಂದು ಸಾಕ್ಷ್ಯ ನುಡಿಯುತ್ತಾರೆ. ನಾನು ಮಾಜಾಳಿಯಲ್ಲಿ ಶಾಲೆ

ಕಲಿತಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲಾ ಎಂದರೆ ಸರಿ. ನಾವು ಆಧರಿಸಿದಂತೆ ಪ್ರತಿವಾದಿಯು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಕ್ರಯದ ಕರಾರು ಪತ್ರವನ್ನು ಮಾಡುವಂತೆ ತಿಳಿಸಿದ್ದು ಸದರಿ ಕ್ರಯಪತ್ರ ನಿಡಿ.2 ಎಂದರೆ ಸಾಕ್ಷಿಯು ಅದನ್ನು ನೋಡಿ ಹೌದು ಎಂದು ನುಡಿಯುತ್ತಾರೆ. ನಿಡಿ.2 ನ್ನು ನಾವೇ ಬರೆದುಕೊಟ್ಟಿರುತ್ತೇವೆ. ಸದರಿ ಕರಾರು ಪತ್ರದ ಪುಟ ಸಂಖ್ಯೆ 2 ಪ್ಯಾರಾ 2 ರಲ್ಲಿರುವ ವಿಷಯವನ್ನು ಸಾಕ್ಷಿಗೆ ಓದಿ ಹೇಳಲಾಗಿ ಸಾಕ್ಷ್ಯ ಅಕನ್ನು ಒಪ್ಪಿರುತ್ತಾರೆ. ಅದೇ ಪುಟದ ಕೊನೆಯ ಪ್ಯಾರಾವನ್ನು ಸಹ ಸಾಕ್ಷಿಗೆ ಓದಿ ಹೇಸಲಾಗಿ ಅದನ್ನು ಸಾಕ್ಷಿ ಒಪ್ಪಿಕೊಂಡಿರುತಾರೆ. ಸದರಿ ಕರಾರು ಪತ್ರದ ತಪಶೀಲಿನಲ್ಲಿ ನಾವು ಮಾರಾಟ ಮಾಡಲು ಇಚ್ಛಿಸಿದ ಕ್ಷೇತ್ರದ ಜಮೀನಿನ ಗಡಿ ಗುರುತುಗಳನ್ನು ನಮೂದಿಸಿರುವುದಿಲ್ಲಾ ಎಂದರೆ ಸರಿ. ನಾನು ಸುಮಾರು ಒಂದು ವರ್ಷಗಳ ಹಿಂದೆ ದಾವಾ ಜಮೀನನ್ನು ನೋಡಲು ಹೋಗಿರುತ್ತೇನೆ. ಅಲ್ಲಿಗೆ ಹೋದರೆ ಮಹಿಳೆಯರು ಮತ್ತು ಮನೆಯ ಎಲ್ಲಾ ಸದಸ್ಯರು ಜಗಳ ಮಾಡಲು ಹಾಗೂ ಹೊಡೆಯಲು ಮುಂದೆ ಬರುತ್ತಾರೆ ಎಂದು ಸಾಕ್ಷಿ ಉತ್ತರಿಸುತ್ತಾರೆ. ಪ್ರತಿವಾದಿಯ ಕಬ್ಜಾ ವಹಿವಾಟಿನಲ್ಲಿ ಇರುವ ಜಾಗೆಯು ಒಟ್ಟು ಜಮೀನಿನ ಉತ್ತರದ ಗಡಿಗೆ ತಾಗಿ ಇರುತ್ತದೆ ಎಂದರೆ ಸರಿ. ಸಾಕ್ಷಿ ಸ್ವತಃ ನಾವು ಮುಂಬೈನಲ್ಲಿರುವಾಗ ನಮ್ಮ ಪರವಾನಿಗೆಯನ್ನು ಪಡೆಯದೇ ಪ್ರತಿವಾದಿಯರು ನಮ್ಮ ಜಮೀನಿನಲ್ಲಿದ್ದ 2-3 ಮಾವಿನ ಮರಗಳನ್ನು ಹಾಗೂ ತೆಂಗಿನ ಮರಗಳನ್ನು ತುಂಡರಿಸಿ ದೇವಸ್ಥಾನ ಮತ್ತು ಮನೆಯನ್ನು ನಿರ್ಮಾಣ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಪ್ರತಿವಾದಿಯರು ದೇವಸ್ಥಾನ ಮತ್ತು ಮನೆಯನ್ನು ನಿರ್ಮಾಣ ಮಾಡಿದ ಬಗ್ಗೆ ನಾನು ಪೋಲೀಸರಿಗೆ ದೂರನ್ನು ನೀಡಿರುವುದಿಲ್ಲಾ , ಆದರೆ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆಂದು ಸಾಕ್ಷ್ಯ ನುಡಿಯುತ್ತಾರೆ. ಈ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲಾ ಎಂದರೆ ಸರಿ. ಸಾಕ್ಷಿಯು ಸ್ವತಃ ಭಾವಚಿತ್ರವನ್ನು ಹಾಜರು ಪಡಿಸಿರುತ್ತೇನೆಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ ಜಮೀನಿನ ಉತ್ತರದ ಭಾಗಕ್ಕೆ ಸೋನು ನಾಯ್ಕು ಹಾಗೂ ಸೈರು ಪವಾರ ಇವರ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲಾ. ಉತ್ತರದ ಗಡಿಗೆ ತಾಗಿ ಯಾವುದೇ ಕಾಲುದಾರಿ ಇರುವುದಿಲ್ಲಾ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲಾ ಎಂದು ಸಾಕ್ಷ್ಯ ನುಡಿಯುತ್ತಾರೆ.

ರಮಾಕಾಂತ , ದುರ್ಗಾದಾಸ ಮತ್ತು ಗಣಪತಿ ವಾಗಳೆ ಇವರಿಗೆ ಮಾಜಾಳಿಯಲ್ಲಿನ ಜಮೀನನ್ನು ಹೊರತುಪಡಿಸಿ ಬೇರೆ ಕಡೆ ಕೂಡ ಜಮೀನು ಇರುತ್ತದೆ ಎಂದರೆ ಸರಿ. ಮಾದಪ್ಪನ ತಂದೆ

ಸದರಿ ರಮಾಕಾಂತ ಮತ್ತಿತರರಿಗೆ ಸೇರಿದ ಜಮೀನನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಮಾದಪ್ಪ ಇವರ ತಂದೆಯನ್ನು ನನ್ನ ತಂದೆಯವರು ನಮ್ಮ ಜಮೀನನ್ನು ನೋಡಿಕೊಳ್ಳಲು ನೇಮಿಸಿದ್ದರೆಂದು ಸಾಕ್ಷ್ಯ ನುಡಿಯುತ್ತಾರೆ. ಈ ಬಗ್ಗೆ ದಾಖಲೆಗಳು ಇರುವುದಿಲ್ಲಾ , ಆದರೆ ಸಾಕ್ಷ್ಯ ಇರುತ್ತದೆ . ನಮ್ಮ ತಂದೆಯು ಯಾವಾಗ ಮತ್ತು ಯಾವ ಇಸವಿಯಲ್ಲಿ ಮಾದಪ್ಪನ ತಂದೆಯನ್ನು ನಮ್ಮ ಜಮೀನನ್ನು ನೋಡಿಕೊಳ್ಳಲು ನೇಮಿಸಿದ್ದರು ಎಂಬುದಕ್ಕೆ ದಾಖಲೆಗಳು ಇರುವುದಿಲ್ಲಾ. ಮಾದಪ್ಪ ಇವರ ತಂದೆಯನ್ನು ನನ್ನ ತಂದೆಯವರು ಯಾವತ್ತೂ ನಮ್ಮ ಜಮೀನನ್ನು ನೋಡಿಕೊಳ್ಳಲು ನೇಮಿಸಿರುವುದಿಲ್ಲಾ ಎಂದರೆ ಸರಿಯಲ್ಲ. ನಮಗೆ ಮತ್ತು ಮಾದಪ್ಪನ ಕುಟುಂಬಕ್ಕೆ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ.

ರಮಾಕಾಂತ , ಗಣಪತಿ ಹಾಗೂ ದುರ್ಗಾದಾಸ ವಾಗಳೆ ಇವರುಗಳು ತಮ್ಮ ಜಮೀನನ್ನು ಮಾದಪ್ಪ ಇವರ ತಂದೆಗೆ ನೋಡಿಕೊಳ್ಳಲು ನೇಮಿಸಿದ್ದರಿಂದ ಸದರಿ ಜಮೀನಿನಲ್ಲಿ ತಮ್ಮ ಹಕ್ಕಿನ ಬಾಬ್ತು ಕ್ಷೇತ್ರದಲ್ಲಿ ಮನೆ ಹಾಗೂ ದೇವಸ್ಥಾನವನ್ನು ನಿರ್ಮಾಣ ಮಾಡಿ ವಾಸ ಮಾಡಿಕೊಂಡು ಬರಲು ಹಿಂದೆಗೆದುಕೊಳ್ಳಲಾಗದ ತೋಂಡಿ ಅನುಮತಿ (irrevocable licence) ನೀಡಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಸ್ವತಃ ರಮಾಕಾಂತ ,ಗಣಪತಿ ಹಾಗೂ ದುರ್ಗಾದಾಸ ವಾಗಳೆ ಇವರು ಯಾವತ್ತೂ ಮಾದಪ್ಪ ಹಾಗೂ ಅವರ ತಂದೆಯನ್ನು ನೋಡಿಯೇ ಇರುವುದಿಲ್ಲಾ ಮತ್ತು ಅವರ ಪರಿಚಯ ಇರುವುದಿಲ್ಲಾ , ಕಾರಣ ರಮಾಕಾಂತ , ಗಣಪತಿ ಹಾಗೂ ದುರ್ಗಾದಾಸ ವಾಗಳೆ ಇವರ ಕುಟುಂಬಸ್ಥರು ಮುಂಬೈನಲ್ಲಿ ವಾಸವಾಗಿರುತ್ತಾರೆಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ ಮೂರು ವ್ಯಕ್ತಿಗಳು ಹಾಗೂ ಅವರ ಕುಟುಂಬಸ್ಥರು ಮುಂಬೈನಲ್ಲೇ ವಾಸವಿದ್ದ ಕಾರಣದಿಂದಲೇ ಅವರ ಬಾಕಿ ಜಮೀನುಗಳನ್ನು ನೋಡಲು ಮಾದಪ್ಪ ನಾಯ್ಕ ಇವರ ತಂದೆಯನ್ನು ನೇಮಿಸಿದ್ದರು ಎಂದರೆ ಸರಿಯಲ್ಲ. ರಮಾಕಾಂತ , ಗಣಪತಿ ಹಾಗೂ ದುರ್ಗಾದಾಸ ವಾಗಳೆ ಇವರುಗಳ ತಂದೆ ಹಾಗೂ ಮಾದಪ್ಪ ನಾಯ್ಕ ಇವರ ತಂದೆಯ ನಡುವೆ ಏನು ವ್ಯವಹಾರ ಆಗಿರುತ್ತದೆ ಎಂಬುದು ನನಗೆ ಗೊತ್ತಿರುವುದಿಲ್ಲಾ. ಸಾಕ್ಷಿ ಸ್ವತಃ ಸದರಿ ರಮಾಕಾಂತ , ಗಣಪತಿ ಹಾಗೂ ದುರ್ಗಾದಾಸ ವಾಗಳೆ ಇವರು ಮುಂಬೈನಲ್ಲಿ ಇದ್ದು , ಅವರಿಗೆ ಮಾದಪ್ಪ ಮತ್ತು ಅವರ ತಂದೆಯ ಬಗ್ಗೆ ಏನೂ ಗೊತ್ತಿರುವುದಿಲ್ಲಾ ಎಂದು ಸಾಕ್ಷ್ಯ ನುಡಿಯುತ್ತಾರೆ. ನನಗೆ ಆ ಕಾಲಕ್ಕೆ ಸುಮಾರು 7-8 ವರ್ಷ ಆಗಿತು. ಸಾಕ್ಷಿ ಸ್ವತಃ ನನ್ನ ತಂದೆಯೇ ಮಾದಪ್ಪ ನಾಯ್ಕ

ಇವರ ತಂದೆಗೆ ಜಮೀನುಗಳನ್ನು ನೋಡಿಕೊಳ್ಳಲು ನೇಮಿಸಿದ್ದರು ಎಂದು ಸಾಕ್ಷ್ಯ ನುಡಿಯುತ್ತಾರೆ. ನಮ್ಮ ತಂದೆ ಮಾದಪ್ಪ ನಾಯ್ಕ ಇವರ ತಂದೆಯನ್ನು ಯಾವತ್ತೂ ಜಮೀನನ್ನು ನೋಡಿಕೊಳ್ಳಲು ನೇಮಿಸಿರುವುದಿಲ್ಲಾ ಹಾಗೂ ರಮಾಕಾಂತ , ಗಣಪತಿ ಹಾಗೂ ದುರ್ಗಾದಾಸ ವಾಗಳೆ ಇವರುಗಳ ಕುಟುಂಬದವರು ಯಾವತ್ತೂ ಮಾದಪ್ಪ ನಾಯ್ಕ ತಂದೆಯನ್ನು ಭೇಟಿ ಮಾಡಿರುವುದಿಲ್ಲಾ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಡಿ.3 ದಾಖಲೆಯಲ್ಲಿ ಮಾದಪ್ಪ ನಾಯ್ಕ ಇವರ ತಂದೆಯ ಹೆಸರು ವಿಶ್ರಾಮ ಮಾದಪ್ಪ ನಾಯ್ಕ ಎಂದು ಕಾಣಿಸಿದ್ದು , ಸದರಿ ಮನೆ ಅವರ ಹೆಸರಿನಲ್ಲಿ 1991-92 ರಿಂದ ಇರುವ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. ರಮಾಕಾಂತ ವಾಗಳೆ ಇವರು ಕೊಟ್ಟ ಹಿಂತೆಗೆದುಕೊಳ್ಳಲಾಗದ ತೋಂಡಿ ಅನುಮತಿ ಪ್ರಕಾರ ಜಮೀನಿನಲ್ಲಿ ಮನೆಯನ್ನು ನಿರ್ಮಾಣ ಮಾಡಿ ವಾಸಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಸ್ವಾಧೀನದಲ್ಲಿರುವ ಜಮೀನಿನಲ್ಲಿ ನಮಗೆ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಇರುವುದಿಲ್ಲಾ ಎಂದರೆ ಸರಿಯಲ್ಲ. ಪ್ರತಿವಾದಿಯರು ಮನೆ ಕಟ್ಟಿ ವಾಸಮಾಡಿಕೊಂಡು ಬಂದಿರುವ ಜಮೀನು ನನಗೆ ಅಥವಾ ನಮ್ಮ ಕುಟುಂಬಕ್ಕೆ ಸೇರಿದ್ದು ಇರುವುದಿಲ್ಲಾ ಎಂದರೆ ಸರಿಯಲ್ಲ. ಪ್ರತಿವಾದಿಯರು ಕಬ್ಜಾ ಹೊಂದಿ ವಾಸ್ತವ್ಯ ಮಾಡಿಕೊಂಡು ಬಂದಿರುವ 18 ಗುಂಟೆ 6.5 ಆಣೆ ಕ್ಷೇತ್ರದ ಜಮೀನು ನಮ್ಮ ಕುಟುಂಬದ ಜಮೀನು ಅಥವಾ ದಾವಾ ಜಮೀನು ಎಂದು ಕಾಣಿಸಲು ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲಾ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನಾವು ಎಲ್ಲಾ ದಾಖಲೆಗಳನ್ನು ನಮ್ಮ ವಕೀಲರಿಗೆ ನೀಡಿರುತ್ತೇವೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಾನು ದಾಖಲೆಗಳನ್ನು ವಕೀಲರಿಗೆ ನೀಡಿರುತ್ತೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಹಾಜರು ಪಡಿಸಿದ ಭಾವಚಿತ್ರಗಳನ್ನು ನನ್ನ ಮೊಬೈಲನಲ್ಲಿ ನಾನು ದೂರನ್ನು ನೀಡಿದ ಸಮಯದಲ್ಲಿ ತೆಗೆದಿರುತ್ತೇನೆ. ಆದರೆ ನನಗೆ ನಿಖರವಾದ ದಿನಾಂಕ ನೆನಪಿರುವುದಿಲ್ಲಾ. ಸದರಿ ಭಾವಚಿತ್ರಗಳಲ್ಲಿ ಸರ್ವೇ ನಂಬರ ಇರುವುದಿಲ್ಲಾ ಎಂದರೆ ಸರಿ. ನಾನು ಹಾಜರು ಪಡಿಸಿದ ಪ್ರಮಾಣ ಪತ್ರವು ಯಾವ ಅಧಿನಿಯಮದ ಅಡಿಯಲ್ಲಿ ಹಾಜರು ಪಡಿಸಿರುತ್ತೇನೆ ಎಂದು ನಮೂದಿಸಿರುವುದಿಲ್ಲಾ ಎಂದರೆ ನನಗೆ ಗೊತ್ತಿಲ್ಲಾ. ಸದರಿ ಪ್ರಮಾಣ ಪತ್ರದಲ್ಲಿ ನನ್ನ ಮೊಬೈಲಿಗೆ ಸಂಬಂಧಪಟ್ಟಂತೆ ಯಾವುದೇ ವಿವರಗಳನ್ನು ನಮೂದಿಸಿರುವುದಿಲ್ಲಾ ಎಂದರೆ ಸರಿ. ಸದರಿ ಭಾವಚಿತ್ರಗಳನ್ನು ನಾನು ಸ್ಟೂಡಿಯೋದಲ್ಲಿ

ಪ್ರಿಂಟ್ ತೆಗೆದಿರುತ್ತೇನೆ. ಸದರಿ ಸ್ಟೂಡಿಯೋದವರಿಂದ ಭಾವಚಿತ್ರವನ್ನು ಪ್ರಿಂಟ ತೆಗೆದ ಬಗ್ಗೆ ಯಾವುದೇ ದಾಖಲೆ ಅಥವಾ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುವುದಿಲ್ಲಾ ಎಂದರೆ ಸರಿ. ಸದರಿ ಭಾವಚಿತ್ರಗಳು ಅಸಂಬದ್ಧ ಹಾಗೂ ದಾವಾ ಜಮೀನಿಗೆ ಸಂಬಂಧಪಟ್ಟದ್ದು ಇರುವುದಿಲ್ಲಾ ಎಂದರೆ ಸರಿಯಲ್ಲ. ಸಿಡಿ ಯನ್ನು ನಾನೇ ಬನಾವಟಿ ಮಾಡಿ ಹಾಜರು ಪಡಿಸಿರುತ್ತೇನೆಂದರೆ ಸರಿಯಲ್ಲ. ಮಾದಪ್ಪ ನಾಯ್ಕ ಇವರ ತಂದೆ ರಮಾಕಾಂತ ವಾಗಳೆ ಕುಟುಂಬದ ಸದಸ್ಯರಿಂದ ಜಮೀನಿನ ಕಬ್ಜಾ ಪಡೆದುಕೊಂಡ ನಂತರ 10 ತೆಂಗಿನ ಸಸಿಗಳು ಹಾಗೂ ಒಂದು ಮಾವಿನ ಮರ ನೆಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ರಮಾಕಾಂತ ವಾಗಳೆ ಕುಟುಂಬದ ಸದಸ್ಯರಿಂದ ಪ್ರತಿವಾದಿ ಮಾದಪ್ಪ ನಾಯ್ಕ ಇವರ ತಂದೆ ಯಾವತ್ತೂ ಜಮೀನಿನ ಕಬ್ಜಾ ಪಡೆದಿರುವುದಿಲ್ಲಾ ಎಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ ದಾವಾ ಆಸ್ತಿಯಲ್ಲಿರುವ ತೆಂಗಿನ ಮರಗಳು ಸುಮಾರು 50 ವರ್ಷ ಹಳೆಯದಾಗಿದ್ದು ಇಂದಿಗೂ ದಾವಾ ಆಸ್ತಿಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಸದರಿ ಮನೆಯು ದಾವಾ ಆಸ್ತಿಯಲ್ಲಿ ಅಸ್ತಿತ್ವದಲ್ಲಿರುವ ಮನೆ ಎಂದರೆ ಸಾಕ್ಷಿಯು ಹೌದು ಎಂದು ಸಾಕ್ಷ್ಯ ನುಡಿದಿದ್ದರಿಂದ ಸದರಿ ಭಾವಚಿತ್ರವನ್ನು ನಿ.ಡಿ.4 ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ವತಃ ಈ ಹಿಂದೆ ಒಂದು ಸಣ್ಣ ಮನೆ ಇದ್ದು , ಅದಕ್ಕೆ ಎರಡು ಕೊಠಡಿಗಳನ್ನು ಸೇರಿಸಿದ್ದು , ನಂತರ ನಿಡಿ.4 ನ್ನು ತೆಗೆಯಲಾಗಿರುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಸಾಕ್ಷಿಗೆ ಇನ್ನೊಂದು ಭಾವಚಿತ್ರವನ್ನು ತೋರಿಸಲಾಗಿ , ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ.5 ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ವತಃ ನಿಡಿ.5 ರಲ್ಲಿ ಕಾಣುವ ದೇವಸ್ಥಾನವನ್ನು ಇತ್ತೀಚೆಗೆ ಪ್ರತಿವಾದಿಯರು ನಿರ್ಮಾಣ ಮಾಡಿದ್ದು , ಈ ಹಿಂದೆ ಅದು ಖುಲ್ಲಾ ಜಾಗ ಇತ್ತೆಂದು ಸಾಕ್ಷ್ಯ ನುಡಿಯುತ್ತಾರೆ. ಪ್ರತಿವಾದಿಯ ತಂದೆಯ ಕಾಲದಿಂದಲೂ ಮನೆ ಮತ್ತು ದೇವಸ್ಥಾನದ ಬಗ್ಗೆ ಮಾಜಾಳಿ ಗ್ರಾಮ ಪಂಚಾಯತಿಗೆ ತೆರಿಗೆ ತುಂಬುತ್ತಿದ್ದಾರೆಂದರೆ ಸರಿಯಲ್ಲ. ಸದರಿ ಮನೆಗೆ ಹಾಗೂ ದೇವಸ್ಥಾನಕ್ಕೆ ಪ್ರತಿವಾದಿಯರು ವಿದ್ಯುಚ್ಛಕ್ತಿ ಸಂಪರ್ಕವನ್ನು ಪಡೆದುಕೊಂಡಿರುತ್ತಾರೆಂದರೆ ಸರಿ. ಸದರಿ ಕಟ್ಟಡಕ್ಕೆ ಪಡೆದುಕೊಂಡು ವಿದ್ಯುತ ಸಂಪರ್ಕದ ಬಗ್ಗೆ ವಿದ್ಯುಚ್ಛಕ್ತಿ ಬಿಲ್ ಗಳನ್ನು ಪ್ರತಿವಾದಿಯರು ತುಂಬುತ್ತಾರೆ ಎಂದರೆ ಇರಬಹುದು. ಪ್ರತಿವಾದಿಯರು ಸದರಿ ಮನೆಯಲ್ಲಿ ವಾಸಮಾಡುತ್ತಿದ್ದ ಬಗ್ಗೆ ಸಂಬಂಧಪಟ್ಟ ಇಲಾಖೆಯಿಂದ ಪಡಿತರ ಚೀಟಿ ಪಡೆದುಕೊಂಡಿರುತ್ತಾರೆಂದರೆ ಸರಿಯಲ್ಲ. ನಮ್ಮ ಜಮೀನಿಗೆ ಮತ್ತು ಪ್ರತಿವಾದಿಯರ ಕಬ್ಜಾವಹಿವಾಟಿನಲ್ಲಿರುವ ಜಮೀನಿಗೆ

ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ಪ್ರತಿವಾದಿಯರು ವಾಸ್ತವ್ಯ ಮಾಡುವ ಜಮೀನು ಹಾಗೂ ನಾವು ಬರೆದುಕೊಟ್ಟ ಕರಾರುಪತ್ರಕ್ಕೆ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ಪ್ರತಿವಾದಿಯರು ಉಪಭೋಗ ಮಾಡುತ್ತಿರುವ ಜಮೀನು ಹಾಗೂನಮ್ಮ ಜಮೀನು ಬೇರೆ ಬೇರೆ ಇರುತ್ತದೆಂದರೆ ಸರಿಯಲ್ಲ. ಈ ದಾವೆಯನ್ನು ಹೂಡಲು ನನಗೆ ಯಾವುದೇ ಹಕ್ಕು ಇರುವುದಿಲ್ಲಾ ಮತ್ತು ಪ್ರತಿವಾದಿಯರು ಸ್ವಾಧೀನದಲ್ಲಿರುವ ಜಮೀನಿನ ಮಾಲೀಕರು ನಾವು ಇರುವುದಿಲ್ಲಾ ಎಂದರೆ ಸರಿಯಲ್ಲ. ಆ ಕಾರಣದಿಂದ ಈ ದಾವೆಯು ಊರ್ಜಿತವಾಗುವುದಿಲ್ಲಾ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲ –**

**(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ,**

**ಸಿವಿಲ್ ನ್ಯಾಯಾಧೀಶರು ಕಾರವಾರ**